O.S. ನಂಬರಃ 43/2021

ಪಿ. ಡಬ್ಲ್ಯೂಃ 1

ದಿಃ 04-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ</u> ಪ್ರತಿವಾದಿಯ ಪರ ವಕೀಲರಾದ ಶ್ರೀಮತಿ ಎಸ್ ಎನ್ ಹೆಚ್ ಇವರಿಂದಃ

2. ದಾವಾ ಆಸ್ತಿ ಗೇಣಿ ಜಮೀನು ಎಂದರೆ ಸರಿ. ಭೂ-ನ್ಯಾಯಮಂಡಳಿಯವರು ಸುಬ್ರಾಯ್ ಸಿದ್ದಿ ಇವರಿಗೆ ಪಟ್ಟಾವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಕೊಟ್ಟಿದ್ದು ಅವರು ಮರಣಪಟ್ಟ ನಂತರ ಸುಬ್ರಾಯ್ ಸಿದ್ದಿ ಇವರು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಭೂ-ನ್ಯಾಯಮಂಡಳಿಯವರ ನಿಮ್ಮ ತಂದೆಗೆ ಮಂಜೂರು ಮಾಡಿರುತ್ತಾರೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ರೆಕಾರ್ಡ ಉತಾರವನ್ನು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಭೂ-ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ್ದರ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೂರ್ಣ ಕ್ಷೇತ್ರವಾದ 8 ಎಕರೆಗೆ ಸಾವಿತ್ರಿ ಬೆಳ್ಳಿಯಾ ಸಿದ್ದಿ ಇವರು ತನ್ನ ಹೆಸರಿಗೆ ಮಾಡಿಕೊಂಡಿದ್ದಳು ಎಂದರೆ ಸರಿ. ಉಚ್ಚ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿ ಸುಬ್ರಾಯ ಸಿದ್ದಿ ಇವರು ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಜಮೀನು ಎಂದಿಗೂ

ಸಹ ನಾಗು ಸಿದ್ದಿ ಇವರ ಕಬ್ಜಾ ವಹಿವಾಟಿಯಲ್ಲಿ ಇರಲಿಲ್ಲ, ಸುಬ್ರಾಯ್ ಸಿದ್ದಿಯೇ ಮಾಡಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಒಬ್ಬರು ನೀಲು ನಾರಾಯಣ ರೈತ ಆಗಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರಿಂದ ಸುಬ್ರಾಯ್ ಸಿದ್ದಿ ಇವರು ಪೋರ್ಟ ಗೇಣಿ ಮಾಡಿಕೊಂಡು ಕಬ್ಜಾ ವಹಿವಾಟಿ ಮಾಡಿಕೊಂಡು ಬಂದಿದ್ದ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗೂ ಹಾಗೂ ನಾಗು ಸಿದ್ದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನೀವು ನಾಗು ಸಿದ್ದಿ ಇವರ ಜೊತೆ ಮತ್ತಿಗಟ್ಟದಲ್ಲಿ ಎಷ್ಟು ವರ್ಷ ಇದ್ದಿರಿ ಎಂದರೆ ಸಾಕ್ಷಿಯು ಕೂಲಿಗೆ ಎಂದು ಹೋಗಿದ್ದು ಎಂದು ನುಡಿಯುತ್ತಾರೆ. ಮತ್ತಿಗಟ್ಟದಲ್ಲಿ ನಿಮ್ಮ ಹೆಸರಿನಲ್ಲಿ ಜಮೀನು ಇರುತ್ತದೆ ಎಂದರೆ ಸರಿ. ಅದನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. 6ನೇ ಪ್ರತಿವಾದಿಯ ಹೆಸರಿನಲ್ಲೂ ಸಹ 3 ಎಕರೆ ಜಮೀನು ಇದೆ ಎಂದರೆ ಗೊತ್ತಿರುವುದಿಲ್ಲ. ಸದರಿ ಜಮೀನನ್ನೂ ಸಹ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. 6ನೇ ಪ್ರತಿವಾದಿಯು ಅತಿಕ್ರಮಣ ಮಾಡಿಕೊಂಡ ಜಮೀನಿನಲ್ಲಿ ನಾಗು ಸಿದ್ದಿ ಇವರ ಮನೆ ಇತ್ತು ಎಂದರೆ ಸರಿಯಲ್ಲ. ಮದರಪಾಲಿನಲ್ಲಿ ಇದ್ದಿದ್ದು, ಅದೇ ಮನೆಯಲ್ಲಿ ಮರಣಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾಗು ಸಿದ್ದಿ ಈತನು ಸಾಯುವವರೆಗೆ ಮದರಪಾಲಿನಲ್ಲಿ ಇದ್ದ ಮನೆ ಬಿಟ್ಟು ಬೇರೆ ಯಾವುದೇ ಜಮೀನು ಅಥವಾ ಆಸ್ತಿ ಆತನ ಹೆಸರಿನಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಮದರಪಾಲಿನಲ್ಲಿ ಇದ್ದ ಮನೆಯು ಬಿದ್ದುಹೋಗಿ ಸುಮಾರು 30 ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು 15 ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ನಿಮ್ಮ ತಾಯಿ ಶಾರದಾ ನಾಗು ಸಿದ್ಧಿ ಇವರು ಮತ್ತಿಗಟ್ಟದಲ್ಲಿ ಎಷ್ಟು ವರ್ಷ

ಇದ್ದರು ಎಂದರೆ ಸಾಕ್ಷಿಯು ಒಂದು ವರ್ಷ ಇದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆ-ತಾಯಿಯರ ಆಧಾರ ಕಾರ್ಡ, ರೇಷನ್ ಕಾರ್ಡ ಇವೆಲ್ಲವೂ ಸಹ ಮತ್ತಿಗಟ್ಟದಲ್ಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಅವರು ಮಗಳ ಮನೆಯಲ್ಲಿ ಹೋಗಿ ವಾಸ್ತವ್ಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆ-ತಾಯಿಯ ಆಧಾರ ಕಾರ್ಡ, ರೇಷನ್ ಕಾರ್ಡ  ಮದರಪಾಲಿನಲ್ಲಿ ಇತ್ತು ಎಂದರೆ ಸಾಕ್ಷಿಯು ನನ್ನ ತಂದೆಯ ರೇಷನ್ ಕಾರ್ಡ ಇತ್ತು ಎಂದು ನುಡಿಯುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು  ಪಂಚಾಯತ್ ಕಚೇರಿಗೆ  ಅದನ್ನು ತೆಗೆಸಲು ಹೋದಾಗ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಕಮ್ಮಾಣಿಯಲ್ಲಿ ಸುಬ್ರಾಯ್ ಸಿದ್ದಿ ಹಾಗೂ ಆತನ ಹೆಂಡತಿ ಸರಕಾರದಿಂದ ಮಂಜೂರಾದ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಇದ್ದಾರೆ ಎಂದರೆ ಸರಿ.  ನೀವು ಬುಡಕಟ್ಟು ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಬುಡಕಟ್ಟು ಜನಾಂಗದವರಿಗೆ ಸರಕಾರದವರು ಜಮೀನನ್ನು ಮಂಜೂರು ಮಾಡಿದ್ದು, ಅದರಲ್ಲಿ ಪಾರ್ವತಿ ಸಿದ್ದಿ ಮನೆ ಕಟ್ಟಿಕೊಂಡು ವಾಸ್ತವ್ಯ ಇದ್ದಾರೆ ಎಂದರೆ ಸರಿ.  ಮನೆ ಸಂಖ್ಯೆ 10 ಎಂದರೆ ಸರಿ.  ದಾವಾ ಜಮೀನು ಮತ್ತು ಮನೆ ನಿಮಗೆ ಯಾವುದೇ ರೀತಿಯಲ್ಲಿ ಸಂಬಂಧಪಟ್ಟಿದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

2. ನೀವು ಮತ್ತಿಗಟ್ಟದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೀರಿ ಎಂದರೆ ಸರಿ. ಅದರ ಮನೆ ಸಂಖೆ 63 ಆಗಿರುತ್ತದೆ. ಅದೇ ರೀತಿ 6ನೇ ಪ್ರತಿವಾದಿಯು ಮನೆ ಕಟ್ಟಿಕೊಂಡು ಇದ್ದಾನೆ ಎಂದರೆ ಸರಿ.  ನಿಮ್ಮ ತಂದೆಯ ಜೀವಿತಾಕಾಲದಲ್ಲಿ ನೀವೆಲ್ಲರೂ ಸ್ವಂತ

ಸಂಪಾದನೆಯಿಂದ ಜಮೀನನ್ನು ಸಂಪಾದಿಸಿ, ಮನೆ ಕಟ್ಟಿಕೊಂಡು ವಾಸ್ತವ್ಯ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ತಂದೆಯ ಕಾಲದಲ್ಲಿ ಯಾವುದೂ ಸಹ ಜಮೀನು ಇರುವುದಿಲ್ಲ, ಅವರು ಮರಣಪಟ್ಟ ನಂತರ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಅದೇ ರೀತಿ ಸುಬ್ರಾಯ್ ಸಿದ್ದಿ ಈತನೂ ಸಹ ಸ್ವಂತ ಸಂಪಾದನೆಯಿಂದ ಕಮ್ಮಾಣಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ್ತವ್ಯ ಮಾಡಿಕೊಂಡಿದ್ದಾನೆ ಎಂದರೆ ಸರಿ. ದಾವಾ ಆಸ್ತಿಗಳು ಸುಬ್ರಾಯ್ ಸಿದ್ದಿ ಇವರ ಸ್ವಂತ ಜಮೀನುಗಳು ಆಗಿದ್ದು, ನಿಮಗೆ ಯಾವುದೇ ರೀತಿಯಲ್ಲಿ ಸಂಬಂಧಪಟ್ಟಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.13/2 ರಲ್ಲಿ ಸುಬ್ರಾಯ್ ಸಿದ್ದಿ ಇವರ ಮಕ್ಕಳಲ್ಲಿ ವಾಂಟಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ವಾಂಟಣಿ ಮಾಡಿಕೊಂಡು ಅವರು ಪ್ರತ್ಯೇಕವಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಬ್ಜಾ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮ್ಯುಟೇಶನ್ ಪ್ರಕ್ರಿಯೆ ಆಗುವ ಸಂದರ್ಭದಲ್ಲಿ ನೀವು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಅದು ನಿಮಗೆ ಸಂಬಂಧಪಟ್ಟ ಜಮೀನು ಅಲ್ಲದೇ ಇರುವ ಕಾರಣ ನಿಮಗೆ ನೋಟೀಸನ್ನು ಕಳುಹಿಸಿರುವುದಿಲ್ಲ, ಶ್ಯಾನಬೋಗ ಕಚೇರಿಯ ಭಾವಡಿಯಲ್ಲಿ ನೋಟೀಸನ್ನು ಅಂಟಿಸಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಮ್ಯುಟೇಶನ್ ಎಂಟ್ರಿಯ ವಿರುದ್ಧ ಮತ್ತು ಸುಬ್ರಾಯ್ ಸಿದ್ದಿ ಇವರ ಹೆಸರಿಗೆ ಆದ ಪಟ್ಟಾವನ್ನು ಪ್ರಶ್ನೆ ಮಾಡಿ ಎಸಿ ಅಥವಾ ಡಿಸಿ ಕಚೇರಿಗೆ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನೀವು ಯಾವ ರೀತಿ ಮತ್ತಿಗಟ್ಟದಲ್ಲಿ

ಸ್ವಂತ ಜಮೀನನ್ನು ಸಂಪಾದಿಸಿರುತ್ತಿರೋ ಅದೇ ರೀತಿ ಸುಬ್ರಾಯ್ ಸಿದ್ದಿ ಕಮ್ಮಾಣಿಯಲ್ಲಿ ಸ್ವಂತ ಜಮೀನನ್ನು ಸಂಪಾದಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಿಮಗೆ ದಾವಾ ಜಮೀನಿನಲ್ಲಾಗಲಿ ಅಥವಾ ದಾವಾ ಮನೆಯಲ್ಲಾಗಲಿ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಬುದ್ಯಾಪೂರ್ವಕವಾಗಿ ಪ್ರತಿವಾದಿಯರನ್ನು ಸತಾಯಿಸಲು ಹಾಗೂ ಹಣ ಕಬಳಿಸುವ ಉದ್ದೇಶದಿಂದ ಈ ರೀತಿಯ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.